(606)

ANNEXURE-R1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ, 2019-20ನೇ ಸಾಲಿನಲ್ಲಿ ವಿಶೇಷ ನೇಮಕಾತಿ ಸಮಿತಿ ಮೂಲಕ ವೈದ್ಯಾಧಿಕಾರಿಗಳನ್ನು ನೇಮಿಸುವ ಬಗ್ಗೆ.

ಓದಲಾಗಿದೆ: 1. ಅಧಿಸೂಚನೆ ಸಂಖ್ಯೆ: ಆಕುಕ 71 ಹೆಚ್ ಎಸ್ ಹೆಚ್ 2019, ದಿನಾಂಕ:13.05.2021.

2.'ಕರ್ನಾಟಕ ರಾಜ್ಯ ಸೇವೆಗಳ (ವೈಧ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2017, ದಿನಾಂಕ:11.07.2017.

--*--*--*--

ಪ್ರಸ್ತಾವನೆ:

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ(1)ರ ಆದೇಶದಲ್ಲಿ, 2019-20ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿಶೇಷ ನೇಮಕಾತಿ ಸಮಿತಿ ಮೂಲಕ ಆಯ್ಕೆಗೊಂಡಿರುವ 715 ತಜ್ಞ ವೈದ್ಯರು ಹಾಗೂ 1048 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಹೈದ್ರಾಬಾದ್ ಕರ್ನಾಟಕ ಹುದ್ದೆಗಳು ಸೇರಿದಂತೆ) ಹುದ್ದೆಗಳಿಗೆ ನೇಮಕಾತಿ ಮಾಡುವ ಮುನ್ನ ಅವರ ವಯಸ್ಸು, ವಿದ್ಯಾರ್ಹತೆ ಹಾಗೂ ಶಾರೀರಿಕ ಸುಸ್ಥಿತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳ ಮೂಲ ದಾಖಲೆಗಳು ಮತ್ತು ಮೀಸಲಾತಿಯ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲಿಸಿ, ತಾಳೆನೋಡಿ, ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಗುಣ ಮತ್ತು ನಡತೆಯ ಸತ್ಯಾಪನ ಪ್ರಮಾಣ ಪತ್ರಗಳನ್ನು ಬಾಕಿ ಇರಿಸಿ ಅವರುಗಳಿಗೆ ನೇಮಕಾತಿ ಮಾಡುತ್ತಿರುವುದರಿಂದ, ಅವರಿಂದ ಅಫಿಡವಿಟ್‌ನ್ನು ಪಡೆದು ಸಮಾಲೋಚನೆ ಮೂಲಕ ನಿಯಮಾನುಸಾರ ಸ್ಥಳ ನಿಯುಕ್ತಿಗೊಳಿಸಲು ಆದೇಶಿಸಲಾಗಿತ್ತು.

ಆದರೆ ರಾಜ್ಯದಲ್ಲಿ ಕೋವಿಡ್-19ರ ಎರಡನೇ ಅಲೆಯ ತೀವ್ರತೆ ಹಿನ್ನೆಲೆಯಲ್ಲಿ ಇದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಜ್ಞರು/ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಅತೀ ಜರೂರಾಗಿ ಭರ್ತಿ ಮಾಡಬೇಕಾಗಿದೆ ಎಂಬ ಆಯುಕ್ತಾಲಯದ ಮನವಿಯ ಮೇರೆಗೆ ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ 'ಕರ್ನಾಟಕ ರಾಜ್ಯ ಸೇವೆಗಳ (ವೈಧ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011 (2011ರ ಕರ್ನಾಟಕ ಅಧಿನಿಯಮ) ಸಂಖ್ಯೆ(2)ಕ್ಕೆ ದಿನಾಂಕ: 11.07.2017 ರಂದು ತಂದಿರುವ ತಿದ್ದುಪಡಿಯಂತೆ ಆರಂಭಿಕ ನೇಮಕಾತಿಯನ್ನು (initial appointment) ಸಮಾಲೋಚನೆ ಬದಲಾಗಿ ಪ್ರಸ್ತುತ ಇರುವ ಖಾಲಿ ಹುದ್ದೆಗಳ ಮಾಹಿತಿ ಹಾಗೂ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳು ನೀಡಿರುವ ವಿಳಾಸವನ್ನಾದರಿಸಿ ಅದೇ ಜಿಲ್ಲೆಯಲ್ಲಿ ಅಥವಾ ಅದೇ ಜಿಲ್ಲೆಯಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಅಕ್ಕ ಪಕ್ಕದ ಜಿಲ್ಲೆಗೆ/ಇತರ ಜಿಲ್ಲೆಗಳಿಗೆ ಸು-ಮೋಟೋ (suo-moto) ಆಧಾರದ ಮೇಲೆ ನೇಮಕಾತಿ ಮಾಡಲು ಸರ್ಕಾರ ತೀರ್ಮಾನಿಸಿದ್ದು, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 71 ಹೆಚ್ಎಸ್.ಹೆಚ್ 2019,**

**ಬೆಂಗಳೂರು, ದಿನಾಂಕ:18.05.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ವಿಶೇಷ ನೇಮಕಾತಿ ಸಮಿತಿ ಮೂಲಕ ಆಯ್ಕೆಗೊಂಡಿರುವ 715 ತಜ್ಞ ವೈದ್ಯರು ಹಾಗೂ 1048 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ (ಹೈದ್ರಾಬಾದ್ ಕರ್ನಾಟಕ ಹುದ್ದೆಗಳು ಸೇರಿದಂತೆ) ಹುದ್ದೆಗಳಿಗೆ ನೇಮಕಾತಿ ಮಾಡುವ ಮುನ್ನ ಅವರ ವಯಸ್ಸು, ವಿದ್ಯಾರ್ಹತೆ ಹಾಗೂ ಶಾರೀರಿಕ ಸುಸ್ಥಿತಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳ ಮೂಲ ದಾಖಲೆಗಳು ಮತ್ತು ಮೀಸಲಾತಿಯ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲಿಸಿ, ತಾಳೆನೋಡಿ, ಅಭ್ಯರ್ಥಿಗಳ ಜಾತಿ ಮತ್ತು ಆದಾಯ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಗುಣ ಮತ್ತು ನಡತೆಯ ಸತ್ಯಾಪನ ಪ್ರಮಾಣ ಪತ್ರಗಳನ್ನು ಬಾಕಿ ಇರಿಸಿ ಅವರುಗಳಿಗೆ 'ಕರ್ನಾಟಕ ರಾಜ್ಯ ಸೇವೆಗಳ (ವೈಧ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011 (2011ರ ಕರ್ನಾಟಕ ಅಧಿನಿಯಮ) ಸಂಖ್ಯೆ(2)ಕ್ಕೆ ದಿನಾಂಕ: 11.07.2017 ರಂದು ತಂದಿರುವ ತಿದ್ದುಪಡಿಯಂತೆ ಆರಂಭಿಕ

--2

ನೇಮಕಾತಿಯನ್ನು (Initial appointment) ಸಮಾಲೋಚನೆ ಬದಲಾಗಿ ಪ್ರಸ್ತುತ ಇರುವ ಖಾಲಿ ಹುದ್ದೆಗಳ ಮಾಹಿತಿ ಹಾಗೂ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳು ನೀಡಿರುವ ವಿಳಾಸವನ್ನಾದರಿಸಿ ಅದೇ ಜಿಲ್ಲೆಯಲ್ಲಿ ಅಥವಾ ಅದೇ ಜಿಲ್ಲೆಯಲ್ಲಿ ಹುದ್ದೆ ಖಾಲಿ ಇಲ್ಲದಿದ್ದಲ್ಲಿ ಅಕ್ಕ ಪಕ್ಕದ ಜಿಲ್ಲೆಗೆ/ಇತರ ಜಿಲ್ಲೆಗಳಿಗೆ ಸು-ಮೋಟೋ (suo-moto) ಆಧಾರದ ಮೇಲೆ ಸ್ಥಳ ನಿಯುಕ್ತಿಗೊಳಿಸಲು ತೀರ್ಮಾನಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯ. ಶಿವಶಂಕರ್) 18/5/2021
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಸೇವೆಗಳು)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಪತ್ರವನ್ನು ಹೊರಡಿಸಿದೆ
ದಿನಾಂಕ: 18/05/2021
ಸಹಿ: (4) Four

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು(ಲೆಕ್ಕ ಪತ್ರ/ಲೆಕ್ಕ ಪರಿಶೋಧನೆ/ಎ&ಇ),ಕರ್ನಾಟಕ,ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ನಿರ್ದೇಶಕರು, (ವೈದ್ಯಕೀಯ ಶಿಕ್ಷಣ), ಆನಂದರಾವ್ ವೃತ್ತ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ,

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿರವರ ಆಪ್ತ ಶಾಖೆ, ಆಕುಕ ಇಲಾಖೆ.

Scanned by CamScanner